**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ' ಸೋಜಾ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

ವಿಷಯ: ಅಡಿಕೆ ಕೃಷಿಕರಿಗೆ ಈ ಬಾರಿ ಮತ್ತೆ ಕೊಳೆರೋಗ ಭೀತಿ ಮಳೆಯಿಂದ ಶಿಲೀಂದ್ರ ರೋಗ, 2018 ರಲ್ಲಿ ಕೊನೆಯ ಬಾರಿಗೆ ಜಿಲ್ಲೆಯಲ್ಲಿ ಕೊಳೆರೋಗ ಕಾಣಿಸಿಕೊಂಡಿತ್ತು, ಆ ಬಳಿಕದ ವರ್ಷಗಳಲ್ಲಿ ಜುಲೈ ತಿಂಗಳಿನಲ್ಲಿ ಮಳೆ ಕ್ಷೀಣವಾಗಿ ಸುರಿದಿದ್ದು, ಮದ್ಯೆ ಹಲವು ಬಿಸಿಲಿನ ವಾತಾವರಣವೇ ಇತ್ತು. ಹಾಗಾಗಿ ರೋಗಬಾದೆ ಇರಲಿಲ್ಲ. ಇದ್ದರೂ ಕೆಲವು ಕಡೆ ಮಾತ್ರ ಕಾಣಿಸಿಕೊಂಡಿತ್ತು, ಆದರೆ ಈ ಬಾರಿ ಕಳೆದ ಸುಮಾರು 15-20 ದಿನಗಳಿಂದ ಮಳೆ ತೀವ್ರ ಹೆಚ್ಚಾಗಿದೆ. ವಾತಾವರಣದ ತಾಪಮಾನವು 18 ರಿಂದ 22 ಡಿಗ್ರಿ ಸೆ. ಆಸುಪಾಸಿನಲ್ಲಿರುವುದು, ಜೊತೆಗೆ ಆರ್ದ್ರತೆ ಶೇ.85-90 ರಷ್ಟು ಇರುವುದು ಮಹಾಳಿ ರೋಗಕ್ಕೆ ಕಾರಣವಾಗುವ ಶಿಲೀಂದ್ರ ಕ್ಷಿಪ್ರವಾಗಿ ಬೆಳವಣಿಗೆ ಮತ್ತು ಪ್ರಸಾರಗೊಳ್ಳುವುದಕ್ಕೆ ಪೂರಕ ಪರಿಸ್ಥಿತಿ ಸೃಷ್ಟಿಸಿದೆ. ಇದು ಕೊಳೆರೋಗದ ಭೀತಿ ಹೆಚ್ಚಾಗಲು ಕಾರಣವಾಗಿದೆ.

ಈ ಬಾರಿ ಹವಾಮಾನ ಬದಲಾವಣೆಯಂತಹ ಕಾರಣಗಳಿಂದಾಗಿ ಕೊಳೆರೋಗವಲ್ಲದ ಅಡಿಕೆ ನಳ್ಳಿ ಹಂತದಲ್ಲೇ ಉದುರತೊಡಗಿರುವುದು ಕೂಡ ಕಳವಳ ಸೃಷ್ಟಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಸುಬ್ರಮಣ್ಯ, ಪುತ್ತೂರು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಅಲ್ಲದೇ ಇತರೆ ಭಾಗದ ಆಸುಪಾಸಿನ ಘಟ್ಟದ ತಪ್ಪಲಿನಲ್ಲಿರುವ ರೈತರು ಹವಾಮಾನ ಬದಲಾವಣೆಯಿಂದಾಗಿ ಆಗಿರುವ ಈ ಪರಿಣಾಮವನ್ನು ಎದುರಿಸುತ್ತಿದ್ದಾರೆ. ಸಾಮಾನ್ಯವಾಗಿ ಅಡಿಕೆಗೆ ಎಪ್ರಿಲ್-ಮೇ ತಿಂಗಳಲ್ಲಿ ಮಳೆ ಬಂದರೆ ಉತ್ತಮ ಬೆಳವಣಿಗೆಯಾಗುತ್ತದೆ. ಆದರೆ ಆ ಮಳೆ ಬಾರದೆ ಹೋದರೆ ಬಿಸಿಲಿನ ಝಳಕ್ಕೆ ಅತ್ತ ಬೆಳವಣಿಗೆಯೂ ಆಗದ, ಇತ್ತ ಎಳೆಯೂ ಅಲ್ಲದ ಅಡಿಕೆಗಳು ನಳ್ಳಿ ಹಂತದಲ್ಲಿಯೇ ಬೀಳತೊಡಗುತ್ತದೆ. ಈ ರೋಗ ಮತ್ತು ನಳ್ಳಿ ಹಂತದಲ್ಲಿ ಉದುರತೊಡಗಿರುವ ಅಂಶವನ್ನು ಗಮನಿಸಿ, ಈ ಬಗ್ಗೆ ತೋಟಗಾರಿಕೆ ಮಾತ್ರವಲ್ಲ ಸರ್ಕಾರವು ಕೂಡ ಕೊಳೆರೋಗ ನಿಯಂತ್ರಿಸಲು ರೈತರಿಗೆ ಕನಿಷ್ಠ ರೂ.50 ಕೋಟಿ ಬಿಡುಗಡೆ ಮಾಡಿ ರೈತರಿಗೆ ಸಹಾಯ ಮಾಡುವಂತಹ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಕನ್ನಡ ದಿನಪತ್ರಿಕೆ ಉದಯವಾಣಿಯಲ್ಲಿ ಅಡಿಕೆ ಕೃಷಿಕರಿಗೆ ಈ ಬಾರಿ ಮತ್ತೆ ಕೊಳೆರೋಗ ಭೀತಿ ಎಂಬ ಲೇಖನ ಪ್ರಕಟಗೊಂಡಿತ್ತು. ರೈತರ ಸಹಾಯಕ್ಕೆ ಸರ್ಕಾರ ಬರಬೇಕು. ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿರುವ ಕುರಿತು.

**ಉತ್ತರ**: 2022-2023 ನೇ ಸಾಲಿನಲ್ಲಿ ರಾಜ್ಯದಲ್ಲಿ 6.89 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದ್ದು, 10.46 ಲಕ್ಷ ಮೆ.ಟನ್ ಉತ್ಪಾದನೆ ಮಾಡಲಾಗುತ್ತಿದೆ. ಕೊಳೆರೋಗವು ದಕ್ಷಿಣ ಕನ್ನಡ - 40000 ಹೆಕ್ಟೇರ್, ಉತ್ತರ ಕನ್ನಡ - 2500 ಹೆಕ್ಟೇರ್, ಶಿವಮೊಗ್ಗ -800 ಹೆಕ್ಟೇರ್, ಚಿಕ್ಕಮಗಳೂರು-1824 ಹೆಕ್ಟೇರ್, ಒಟ್ಟಾರೆ 45124 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯನ್ನು ಬಾಧಿಸುತ್ತಿರುವುದು ಕಂಡುಬಂದಿರುತ್ತದೆ. ಹಾಸನ ಜಿಲ್ಲೆಯಲ್ಲಿ ಪ್ರಸ್ತುತ ಅಡಿಕೆ ಕೊಳೆ ರೋಗದ ಬಾಧೆಯು ವರದಿಯಾಗಿರುವುದಿಲ್ಲ.

ನಿರ್ವಹಣಾ ಕ್ರಮಗಳು:

- ಕೊಳೆರೋಗವನ್ನು ತಡೆಗಟ್ಟಲು ಶೇ.1 ರ ಬೋರ್ಡೋ ದ್ರಾವಣ ಅಥವಾ ಮೂರು ಗ್ರಾಂ ತಾಮ್ರದ ಅಕ್ಸಿಕ್ಲೋರೈಡ್ ಅಥವಾ 2 ಗ್ರಾಂ ಮೆಟಲಾಕ್ಸಿಲ್+ ಮ್ಯಾಂಕೋಜೆಬ್ 72 ಒಂದು ಲೀಟರ್ ನೀರನಲ್ಲಿ ಕರಗಿಸಿ ಮಳೆಗಾಲ ಪ್ರಾರಂಭವಾಗುವುದಕ್ಕೆ ಮೊದಲು ಮತ್ತು 30-35 ದಿನಗಳ ನಂತರ ಸಿಂಪಡಿಸಬೇಕು.
- ಕಾಯಿ ಗೊಂಚಲುಗಳನ್ನು (ಜೂನ್ ದಲ್ಲಿ ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚುವುದರಿಂದ ಕೊಳೆ ರೋಗವನ್ನು ನಿಯಂತ್ರಿಸಬಹುದು.

ತೋಟಗಾರಿಕೆ ಇಲಾಖೆ ವತಿಯಿಂದ ಅಡಿಕೆ ಬೆಳೆಗಾರರಿಗೆ ನೀಡುತ್ತಿರುವ ಸೌಲಭ್ಯಗಳು ಈ ಕೆಳಕಂಡಂತಿವೆ:

1. ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯ ಉಪ ಕಾರ್ಯಕ್ರಮವಾದ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆ ಘಟಕದಡಿ ಘಟಕ ವೆಚ್ಚ ರೂ.4000 ಗಳಾಗಿದ್ದು, ಇದರಲ್ಲಿ ಶೇ.30 ರಂತೆ, ಪ್ರತಿ ಹೆಕ್ಟೇರ್ ಗೆ ರೂ.1200 ರಂತೆ 4 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿ ದಕ್ಷಿಣ ಕನ್ನಡ ಜಿಲ್ಲೆಗೆ-500 ಹೇಕ್ಟರ್‌ಗಳ ಭೌತಿಕ ಗುರಿಗೆ ರೂ.6.00ಲಕ್ಷಗಳು, ಉತ್ತರ ಕನ್ನಡ ಜಿಲ್ಲೆಗೆ 800 ಹೇಕ್ಟರ್‌ಗಳ ಭೌತಿಕ ಗುರಿಗೆ ರೂ. 10.00 ಲಕ್ಷಗಳು, ಶಿವಮೊಗ್ಗ ಜಿಲ್ಲೆಗೆ 800 ಹೇಕ್ಟರ್‌ಗಳ ಭೌತಿಕ ಗುರಿಗೆ ರೂ. 10.00 ಲಕ್ಷಗಳು, ಉಡುಪಿ ಜಿಲ್ಲೆಗೆ 500 ಹೇಕ್ಟರ್‌ಗಳ ಭೌತಿಕ ಗುರಿಗೆ ರೂ.6.00ಲಕ್ಷಗಳು, ಚಿಕ್ಕಮಗಳೂರು ಜಿಲ್ಲೆಗೆ, 1000 ಹೇಕ್ಟರ್‌ಗಳ ಭೌತಿಕ ಗುರಿಗೆ ರೂ. 12.00ಲಕ್ಷಗಳು ಹಾಗೂ ಹಾಸನ ಜಿಲ್ಲೆಗೆ 1500 ಹೇಕ್ಟರ್‌ಗಳ ಭೌತಿಕ ಗುರಿಗೆ ರೂ. 18.00 ಲಕ್ಷಗಳ ಗುರಿ ನಿಗದಿಯಾಗಿರುತ್ತದೆ.

2. ಅಡಿಕೆ ಮರಗಳಲ್ಲಿ ಸಸ್ಯ ಸಂರಕ್ಷಣಾ ಔಷಧಿ ಸಿಂಪರಣೆಗೆ ಹಾಗೂ ಕಟಾವು ಮಾಡಲು ಕಾರ್ಬನ್ ಫೈಬರ್ ದೋಟಿ ಖರೀದಿಸಲು ತೋಟಗಾರಿಕೆಯ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇಕಡಾ 40 ರಂತೆ ರೂ.40,000/- ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇಕಡಾ 50 ರಂತೆ ರೂ.50,000/- ಸಹಾಯಧನ ನೀಡಲಾಗುತ್ತಿದೆ.

3. ಪ್ರತಿಕೂಲ ಹವಮಾನ ವೈಪರಿತ್ಯಗಳಿಂದ ಬೆಳೆ ನಷ್ಟವಾಗುವ ಸಂಭವನೀಯ ಬೆಳೆಗಳಿಗೆ ರೈತರನ್ನು ಬೆಂಬಲಿಸಲು ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ಯೋಜನೆಯಡಿಯಲ್ಲಿ, ಪ್ರಮುಖ ಅಡಿಕೆ ಬೆಳೆಯುವ ಜಿಲ್ಲೆಗಳಾದ ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾವೇರಿ, ಕೊಡಗು, ಶಿವಮೊಗ್ಗ, ಉತ್ತರ ಕನ್ನಡ, ವಿಜಯನಗರ, ದಾವಣಗೆರೆ, ಉಡುಪಿ, ಹಾಸನ, ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಿಮಾ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಒಟ್ಟು ವಿಮಾ ಮೊತ್ತ ರೂ. 1,28,000 ಗಳಾಗಿದ್ದು, ರೈತರ ವಂತಿಕೆ ಶೇ. 5 ರಂತೆ ರೂ.6400 ಪ್ರತಿ ಹೆಕ್ಟೇರ್ ಗೆ ಪಾವತಿಸಬೇಕಾಗಿರುತ್ತದೆ.

4. 2022-2023 ಹಾಗೂ 2023-24 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅಡಿಕೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ವಾಣಿಜ್ಯ ತೋಟಗಾರಿಕೆ ಬೆಳೆಗಳಾದ ಬಾಳೆ, ತೆಂಗು, ಕಾಫಿ, ಕೋಕೋ, ಕಾಳು ಮೆಣಸು, ಜಾಯಿಕಾಯಿ, ಬೆಣ್ಣೆ ಹಣ್ಣು ಹಾಗೂ ಇತರೆ ಬೆಳೆಗಳನ್ನು ಬೆಳೆಯಲು ಆಯಾ ಬೆಳೆಗೆ ಅನುಗುಣವಾಗಿ ಶೇ.40 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.11952 ರಿಂದ ರೂ.123483 ರವರೆಗೆ ಸಹಾಯಧನವನ್ನು 4 ಹೆಕ್ಟೇರ್ ವರೆಗೆ ನೀಡಲಾಗಿದ್ದು, ನಿರ್ವಹಣೆಗೆ 811.11 ಹೆಕ್ಟೇರ್ ಪ್ರದೇಶದ ನಿರ್ವಹಣೆಗೆ 731 ಫಲಾನುಭವಿಗಳಿಗೆ ರೂ. 149.33 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ.

5. ಇಲಾಖಾ ವತಿಯಿಂದ ಅಡಿಕೆ ತೋಟಗಳ ಪೋಷಕಾಂಶ ನಿರ್ವಹಣೆ, ಬಸಿ ಕಾಲುವೆಗಳನ್ನು ಮಾಡುವುದು, ಹಸಿರೆಲೆ ಗೊಬ್ಬರದ ಬಳಕೆ ಹಾಗೂ ರಸ ಗೊಬ್ಬರಗಳ ಪೂರೈಕೆ ಮತ್ತು ಸಸ್ಯಸಂರಕ್ಷಣಾ ಕ್ರಮಗಳ ಕುರಿತು ವಿಶ್ವವಿದ್ಯಾಲಯದ ತಜ್ಞರು ಹಾಗೂ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಕೈಪಿಡಿ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಹಾಗೂ ತರಬೇತಿ/ಕಾರ್ಯಾಗಾರಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.

HORTI 355 HGM 2024

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು